ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12

ಸಂಖ್ಯೆ: ಪಪೂಶಿ/ಲೆಪ-03/001-NP/2015-16 ದಿನಾಂಕ: 16-05-2015.

## ಅನುದಾನ ಬಿಡುಗಡೆ ಆದೇಶ

ವಿಷಯ:- 2015-16ನೇ ಸಾಲಿಗೆ ಲೆಕ್ಕ ಶೀರ್ಷಿಕೆ "2202-02-001-0-01 (ಯೋಜನೇತರ) ಅಡಿಯಲ್ಲಿ ವೆಚ್ಚ ಭರಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:- ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಎಫ್‌ಡಿ 02 ಬಿಪಿಇ 2015, ಬೆಂಗಳೂರು, ದಿನಾಂಕ: 31-03-2015.

ಜಿಲ್ಲಾ ಮಟ್ಟದ ಪದವಿ ಪೂರ್ವ ಶಿಕ್ಷಣ ಇಲಾಖಾ ಉಪ ನಿರ್ದೇಶಕರ ಕಛೇರಿಗಳ ಸುಲಲಿತ ಕಾರ್ಯ ನಿರ್ವಹಣೆ ಸಲುವಾಗಿ 2015-16ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ "2202-02-001-0-01" (ಯೋಜನೇತರ) ಅಡಿಯಲ್ಲಿ ಪ್ರಯಾಣ ಭತ್ಯೆ/ಸಾದಿಲ್ವಾರು/ಕಟ್ಟಡ ಬಾಡಿಗೆ ಹಾಗೂ ಇಂಧನ ಬಿಲ್ಲುಗಳ ವೆಚ್ಚ ಭರಿಸಲು/ಈ ಕೆಳಕಂಡ ಸವಿವರ ಲೆಕ್ಕ ಶೀರ್ಷಿಕೆಗಳ ಅಡಿ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

| ಕ್ರಮ ಸಂಖ್ಯೆ | ಜಿಲ್ಲಾ ಉಪನಿರ್ದೇಶಕರು | ಆಯಾ ಉಪಶೀರ್ಷಿಕೆಯಡಿ ಬಿಡುಗಡೆಗೊಳಿಸಲಾದ ಅನುದಾನ (ರೂ. ಗಳಲ್ಲಿ) | | | |
|---|---|---|---|---|---|
| | | 041 | 051 | 071 | 195 |
| 1 | ಬೆಂಗಳೂರು ಉತ್ತರ | | 15000 | | |
| 2 | ಬೆಂಗಳೂರು ದಕ್ಷಿಣ | | 15000 | | |
| 3 | ಬೆಂಗಳೂರು ಗ್ರಾಮಾಂತರ | | 15000 | | |
| 4 | ಬಳ್ಳಾರಿ | | 15000 | | 30000 |
| 5 | ಬೆಳಗಾಂ | | 20000 | 45000 | |
| 6 | ಬಾಗಲಕೋಟೆ | | 15000 | | |
| 7 | ಬಿಜಾಪುರ | | 15000 | | 30000 |
| 8 | ಬೀದರ್ | | 15000 | 21600 | 30000 |
| 9 | ದಾವಣಗೆರೆ | | 15000 | 40785 | |
| 10 | ಚಿತ್ರದುರ್ಗ | | 15000 | | 30000 |
| 11 | ಚಿಕ್ಕಮಗಳೂರು | | 15000 | | |
| 12 | ಗದಗ | 2160 | 15000 | | |
| 13 | ಹಾವೇರಿ | | 15000 | | 30000 |

--2

| | | | | | |
|---|---|---|---|---|---|
| 14 | ಧಾರವಾಡ | | 15000 | | |
| 15 | ಗುಲ್ಬರ್ಗಾ | | 15000 | | 52500 |
| 16 | ಹಾಸನ | | 15000 | | 30000 |
| 17 | ಕೋಲಾರ | | 15000 | 31200 | |
| 18 | ಚಾಮರಾಜನಗರ | | 15000 | 8508 | |
| 19 | ಮೈಸೂರು | | 15000 | | |
| 20 | ಮಂಡ್ಯ | | 15000 | | |
| 21 | ಕೊಪ್ಪಳ | 14100 | 15000 | | |
| 22 | ರಾಯಚೂರು | | 15000 | | 30000 |
| 23 | ಉತ್ತರ ಕನ್ನಡ | | 15000 | | 30000 |
| 24 | ಉಡುಪಿ | 5661 | 15000 | 14760 | |
| 25 | ದಕ್ಷಿಣ ಕನ್ನಡ | | 15000 | | 30000 |
| 26 | ಶಿವಮೊಗ್ಗ | | 15000 | | 30000 |
| 27 | ತುಮಕೂರು | | 20000 | | 45025 |
| 28 | ಕೊಡಗು | | 15000 | | |
| 29 | ಚಿಕ್ಕಬಳ್ಳಾಪುರ | | 15000 | 30060 | |
| 30 | ರಾಮನಗರ | | 15000 | | |
| 31 | ಯಾದಗಿರಿ | | 15000 | | |
| | ಒಟ್ಟು | **21,921** | **4,75,000** | **1,91,913** | **3,97,525** |

ಸದರಿ ಆದೇಶದ ಮೂಲಕ ಬಿಡುಗಡೆ ಮಾಡಲಾದ ಅನುದಾನದ ಮೊತ್ತ ಅಕ್ಷರಗಳಲ್ಲಿ:

1. 041 (ಪ್ರಯಾಣ ವೆಚ್ಚ)–ರೂಪಾಯಿ ಇಪ್ಪತ್ತೊಂದು ಸಾವಿರದ ಒಂಬೈನೂರ ಇಪ್ಪತ್ತೊಂದು ಮಾತ್ರ.
2. 051 (ಸಾದಿಲ್ವಾರು ವೆಚ್ಚ)–ರೂಪಾಯಿ ನಾಲ್ಕು ಲಕ್ಷದ ಎಪ್ಪತ್ತೈದು ಸಾವಿರಗಳು ಮಾತ್ರ.
3. 071 (ಕಟ್ಟಡ ಬಾಡಿಗೆ ವೆಚ್ಚ)–ರೂಪಾಯಿ ಒಂದು ಲಕ್ಷದ ತೊಂಭತ್ತೊಂದು ಸಾವಿರದ ಒಂಬೈನೂರ ಹದಿಮೂರು ಮಾತ್ರ.
4. 195 (ಇಂಧನ ವೆಚ್ಚ)–ರೂಪಾಯಿ ಮೂರು ಲಕ್ಷದ ತೊಂಭತ್ತೇಳು ಸಾವಿರದ ಐದುನೂರ ಇಪ್ಪತ್ತೈದು ಮಾತ್ರ.

<u>ಸೂಚನೆಗಳು:–</u>

1. ಸಂಬಂಧಿಸಿದ ಪದವಿ ಪೂರ್ವ ಶಿಕ್ಷಣ ಇಲಾಖಾ ಉಪ ನಿರ್ದೇಶಕರು ಸದರಿ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಆಯಾ ಸವಿವರ ಲೆಕ್ಕ ಶೀರ್ಷಿಕೆಗಳಿಗೆ ಸಂಬಂಧಿಸಿದ ಕಛೇರಿ ವೆಚ್ಚಗಳು ಅಂದರೆ ಉಪನಿರ್ದೇಶಕ ಕಛೇರಿ ಪ್ರಯಾಣ ಭತ್ಯೆ ಬಿಲ್ಲುಗಳನ್ನು 041 **(ಪ್ರಯಾಣ ಭತ್ಯೆ ವೆಚ್ಚಗಳು)**, ಅಂಚೆ ಚೀಟಿ ಖರೀದಿ/ಲೇಖನ ಸಾಮಗ್ರಿ ಮತ್ತು ದೂರವಾಣಿ ಬಿಲ್ ವೆಚ್ಚಗಳನ್ನು 051 **(ಸಾಮಾನ್ಯ ವೆಚ್ಚಗಳು)**, ಉಪನಿರ್ದೇಶಕರ ಕಛೇರಿ ಕಟ್ಟಡ ಬಾಡಿಗೆ ವೆಚ್ಚವನ್ನು 071 **(ಕಟ್ಟಡ ನಿರ್ವಹಣಾ ವೆಚ್ಚಗಳು)** ವಾಹನಗಳ ರಿಪೇರಿ ಹಾಗೂ ಇಂಧನ ವೆಚ್ಚಗಳನ್ನು 195 **(ಸಾರಿಗೆ ವೆಚ್ಚಗಳು)** ಇವುಗಳಲ್ಲಿ ಭರಿಸಲು ಮಾತ್ರ ಉಪಯೋಗಿಸತಕ್ಕದ್ದು.

--3

2. ಖರೀದಿಸಿದ ಪ್ರತಿ ಓಚರುಗಳ ಮೇಲೆ ಹಣ ಸಂದಾಯಮಾಡಿ ರದ್ದುಪಡಿಸಲಾಗಿದೆ ಹಾಗೂ ಖರೀದಿಸಿದ ಸಾಮಗ್ರಿಗಳು 2015-16ನೇ ಸಾಲಿನ ದಾಸ್ತಾನು ಪುಸ್ತಕದ ಪುಟ ಸಂಖ್ಯೆ .........ರಲ್ಲಿ ನಮೂದಿಸಲಾಗಿದೆ ಎಂಬ ಬಗ್ಗೆ ಉಪನಿರ್ದೇಶಕರು ದೃಢೀಕರಿಸಿ ಸಹಿ ಮಾಡಿರಬೇಕು. ದೂರವಾಣಿ ಬಿಲ್ಲುಗಳ ಹಿಂಭಾಗದಲ್ಲಿ ದೂರವಾಣಿ ಕರೆಗಳನ್ನು ಸಾರ್ವಜನಿಕ ಹಿತಾಸಕ್ತಿಯಿಂದ ಮಾಡಲಾಗಿರುವ ಬಗ್ಗೆ ಪ್ರಮಾಣ ಪತ್ರ ದಾಖಲಿಸತಕ್ಕದ್ದು. ವಾಹನಗಳ ಇಂಧನ ವೆಚ್ಚಗಳ ಬಿಲ್ಲುಗಳ ಹಿಂಭಾಗದಲ್ಲಿ ಸಂಬಂಧಿಸಿದ ಲಾಗ್ ಪುಸ್ತಕದಲ್ಲಿ ನಮೂದಿಸಿರುವ ಬಗ್ಗೆ ಪ್ರಮಾಣ ಪತ್ರ ದಾಖಲಿಸಿರತಕ್ಕದ್ದು.

3. ಉಪಶೀರ್ಷಿಕೆ 041 ರಡಿ ಬಿಡುಗಡೆಮಾಡಲಾದ ಅನುದಾನವು ನಿರ್ದೇಶನಾಲಯಕ್ಕೆ ಈಗಾಗಲೇ ಮೇಲುಸಹಿಗಾಗಿ ಸಲ್ಲಿಕೆಯಾಗಿರುವ ಪ್ರಯಾಣಭತ್ಯೆ ಬಿಲ್ಲುಗಳ ತೀರ್ಗಡೆಗೆ ಬಿಡುಗಡೆಗೊಳಿಸಿದೆ. ಉಪಶೀರ್ಷಿಕೆ 051, 071 ಹಾಗೂ 195 ಅಡಿ ಹಾಲಿ ಬಿಡುಗಡೆ ಮಾಡಲಾದ ಮೊತ್ತವು 2015-16ನೇ ಸಾಲಿಗೆ ಪ್ರಥಮ ಕಂತಿನಲ್ಲಿ ನೀಡಲಾಗಿರುತ್ತದೆ. ಮೇಲ್ಕಂಡ ವೆಚ್ಚಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದು ಸವಿವರ ಲೆಕ್ಕ ಶೀರ್ಷಿಕೆಗೂ ಕಾಲಕಾಲಕ್ಕೆ ಡಿ.ಸಿ. ಬಿಲ್‌ಗಳು, ಪ್ರತ್ಯೇಕವಾಗಿ ಸಿದ್ಧಪಡಿಸಿ ಕಾಲಕಾಲಕ್ಕೆ ಈ ನಿರ್ದೇಶನಾಲಯದ ಸಹಾಯಕ ನಿರ್ದೇಶಕರು (ಲೆಕ್ಕಪತ್ರ) ಇವರ ಮೇಲು ಸಹಿ ಪಡೆದು ವೆಚ್ಚ ನಿರ್ವಹಿಸತಕ್ಕದ್ದು.

4. 2015-16ನೇ ಸಾಲಿಗೆ ಪೂರ್ಣಾವಧಿಯಲ್ಲಿ ಅನುದಾನದ ಮಿತಿಯೊಳಗೆ ವೆಚ್ಚ ನಿರ್ವಹಿಸತಕ್ಕದ್ದು ದೂರವಾಣಿ ವೆಚ್ಚಗಳನ್ನು ಆದಷ್ಟು ಕಡಿಮೆ ಮಾಡತಕ್ಕದ್ದು. ಹಾಗೆಯೇ ವಾಹನಗಳ ಬಳಕೆ ಮತ್ತು ಇಂಧನ ವೆಚ್ಚಗಳನ್ನೂ ಸಹ ಆದಷ್ಟು ಕಡಿಮೆ ಮಾಡತಕ್ಕದ್ದು.

ನಿರ್ದೇಶಕರ ಪರವಾಗಿ,
ಪದವಿಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:-

1. ಸಂಬಂಧಿಸಿದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ನಗದು ಗುಮಾಸ್ತರು/ಆಯವ್ಯಯ/ಲೆಕ್ಕಸಮನ್ವಯ ಅಧೀಕ್ಷಕರುಗಳಿಗೆ-ಮುಂದಿನ ಕ್ರಮಕ್ಕಾಗಿ,
3. ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಪ.ಪೂ.ಶಿ.ಇ. ರವರಿಗೆ ಮುಂದಿನ ಕ್ರಮಕ್ಕಾಗಿ.
4. ಕಛೇರಿ ಪ್ರತಿ.